575

ಮೈಸೂರ ಗಿಜಿಟ.

ಸರ್ಕಾರದಿಂದ ಪಾಯಿಷ್ಲಿದ್ದು.

ಬೆಂಗಳೂರು, ಶನಿವಾರ ಆಗಸ್ಟ್ ತಾ|| 23, ಸ್ಟ 1890.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ಸಿನೇ ಬಾಗ.

ಘನವನ್ನು ಹೊಂದಿದ ಶ್ರೀಮ್ಮ ಮೈಸೂರು ಮಹಾರಾಜರವರಿಂದ ಮಂಜೂರಾದ ಆಕ್ಟ್ಗಳು ಮತ್ತು ರೆಗ್ಯುಲೇಷ್ಗಳು.

ಮೈಸೂರ್ ಗವರ್ಮೆಂಟ್,

ಲೆಜಿಸ್ಲೇಟಿವ್ ಇಲಾಖಾ.

ಇದರಡಿ ಕಂಡ ರೆಗ್ಯುಲೇಷ್ಸ್ 1890ನೇ ಇಸವಿ ಮೇ 6ನೇ ಮುಕ್ತುಮಿನಲ್ಲಿ ಘನವನ್ನು ಹೊಂದಿದ ಶ್ರೀಮ್ಮ ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಮಂಜೂರಾತಿಯಂ ಪಡೆದು, ಸಕಲ ಜನಗಳ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟಿರುತಿದೆ.

1890ನೇ ಇಸವಿಯ Iನೇ ನಂಬರ್ ರೆಗ್ಯುಲೇಷ್ಸ್.

ಬೆಂಗಳೂರು ಮತ್ತು ಮೈಸೂರ್ ಷಹರ್ಗಳಲ್ಲಿ ಜಾರಿಯಲ್ಲಿರತಕ್ಕ 1871ನೇ ಇಸವಿಯ ಮ್ಯೂನಿಸಿಪಲ್ ರೆಗ್ಯುಲೇಷ್ಸ್ಗಳನ್ನು ತಿದ್ದುಪಡಿ ಮಾಡತಕ್ಕ ಬಗ್ಗೆ ಹುಟ್ಟಿದ ರೆಗ್ಯುಲೇಷ್ಸ್.

1871ನೇ ಇಸವಿ ಮಾರ್ಚಿ 31ನೇ ಮುಕ್ತುಂ, 51. J. ನಂಬರುಳ್ಳ ಮಂತ್ರಾಲೋಚಕ ಸಮಾಜದೊಳಗಣ ವೈಸರಾಯ್ ವ ಇಂಡ್ಯ ಗವರ್ನರ್ ಜನರಲ್ಲವರ ಇಸ್ತಿಹಾರ್ ಮೂಲಕ ಘೋಷಿಸಲ್ಪಟ್ಟು, ಮತ್ತು 1883ನೇ ಇಸವಿ ಏಪ್ರಿಲ್ 6ನೇ ಮುಕ್ತುಂ 108ನೇ ನಂಬರುಳ್ಳ ಮೈಸೂರ್ ದಿವಾಣರವರ ಇಸ್ತಿಹಾರ್ ಮೂಲಕ ತಿದ್ದುಪಡಿಯಾದ ಮತ್ತು 1888ನೇ ಇಸವಿಯ IIIನೇ ರೆಗ್ಯುಲೇಷ್ಸ್ ಮೂಲಕ ಮೈಸೂರ್ ಷಹರ್ನೊಳು ಜಾರಿಯಲ್ಲಿ ತರಲ್ಪಟ್ಟ ಸ್ಟ 1871ನೇ ಇಸವಿಯ ಕಾಯಿದೆಗಳ ಸಂಗ್ರಹವಾದ ಮ್ಯೂನಿಸಿಪಲ್ ರೆಗ್ಯುಲೇಷ್ಸ್ಗಳನ್ನು ತಿದ್ದುಪಾಡು ಮಾಡ ಬೇಕಾದದ್ದು ಯುಕ್ತವಾಗಿರುವದರಿಂದ ಘನವನ್ನು ಹೊಂದಿದ ಶ್ರೀಮ್ಮಹಾರಾಜ ರಾಜಾಸಾಹೆಬ್ ಬಹದ್ದೂರವರು ಇದರಡಿ ಕಂಡಂತೆ ನಿಬಂಧಿಸಿರುತ್ತಾರೆ:--

1. ಮೇಲೆ ತಿಳಿಸಲ್ಪಟ್ಟ ಮ್ಯೂನಿಸಿಪಲ್ ರೆಗ್ಯುಲೇಷ್ಸ್ಗಳ ಹನ್ನೊಂದನೇ ಸೆಕ್ಷನಿಗೆ ಬದಲಾಗಿ ಇದರಡಿ ಕಂಡಂತೆ ಸೇರಿಸಲ್ಪಡತಕ್ಕದ್ದು, ಏನೆಂದರೆ—

"II. (1.) ಶ್ರೀಮರ್ ಮೈಸೂರ್ ಮಹಾರಾಜಾ ಸರ್ಕಾರದವರು ಆಗಿಂದಾಗ್ಗೆ "ಬೆಂಗಳೂರ್ ಷಹರ್ ಮ್ಯೂನಿಸಿಪೆಲ್ ಕಮ್ಮಿಷನರ್‌ಗಳ ಪ್ರೆಸಿಡೆಂಟರು" ಎಂದು ಕರೆಯಲ್ಪಡುವ ಒಬ್ಬ ಆಫಿಸರನ್ನು ಮೊಕರರ್ರಾಡಬಹುದು. ಮೇಲೆ ಕಂಡ ಗವರ್ಮೆಂಟಿನವರಿಂದ, ಸದರೀ ಆಫಿಸರಿಗೆ, ಮೊಕರರ್ರಾಡಲ್ಪಡಬಹುದಾದ ಇತರ ಕೆಲಸಗಳು ಯಾವದಾದರು ಇದ್ದರೆ ಅಂಥಾ ಕೆಲಸಗಳೊಡನೆ ಸದರೀ ಪ್ರೆಸಿಡೆಂಟ್ ಉದ್ಯೋಗವನ್ನು ಅವರು ವಹಿಸತಕ್ಕದ್ದಲ್ಲದೆ, ಮೇಲೆ ಕಂಡ ಗವರ್ಮೆಂಟಿನವರಿಗೆ ಇಷ್ಟ ವುಂಟಾದಾಗ ಅವರು ಉದ್ಯೋಗ ಪದದಿಂದ ನಿವೃತ್ತಿಸಲ್ಪಡತಕ್ಕದ್ದು. ಮತ್ತು ಅವರಿಗೆ ಈ ರೆಗ್ಯುಲೇಷ್ಯಗಳನ್ನನುಸರಿಸಿ ವಸೂಲಾಗತಕ್ಕ ಮ್ಯೂನಿಸಿಪೆಲ್ ಫಂಡ್‌ಗಳಿಂದಲೂ ಮತ್ತು ಸದರೀ ಗವರ್ಮೆಂಟಿನವರು ಆಗಿಂದಾಗ್ಗೆ ಗೊತ್ತುಮಾಡಬಹುದಾದ ದಾವಾಪಾಯಿಯಂತೆ ಪ್ರತಿ ಫಂಡಿನಿಂದಲೂ ರುಸುಂಗಳು ಸಲ್ಲಬಹುದು. ಪರಂತು ಮೇಲೆ ತಿಳಿಸಲ್ಪಟ್ಟಂತೆ ಪ್ರೆಸಿಡೆಂಟ್ಯಾರೂ ಮೊಕರರ್ರಾಡಲ್ಪಡದ ಪಕ್ಷಕ್ಕೆ ತತ್ಕಾಲದಲ್ಲಿರುವ ಬೆಂಗಳೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರು ಬೆಂಗಳೂರು ಷಹರ್ ಮ್ಯೂನಿಸಿಪೆಲ್ ಕಮ್ಮಿಷನರ್‌ಗಳಿಗೆ ಉದ್ಯೋಗಧರ್ಮ ಪ್ರಯುಕ್ತವಾದ ಪ್ರೆಸಿಡೆಂಟರಾಗಿರತಕ್ಕದ್ದು.

(2.) ಶ್ರೀಮರ್ ಮೈಸೂರ್ ಮಹಾರಾಜಾ ಸರ್ಕಾರದವರು ಆಗಿಂದಾಗ್ಗೆ "ಬೆಂಗಳೂರ್ ಷಹರ್ ಮ್ಯೂನಿಸಿಪೆಲ್ ಕಮ್ಮಿಷನರ್‌ಗಳ ವೈಸ್ ಪ್ರೆಸಿಡೆಂಟರು" ಎಂದು ಕರೆಯಲ್ಪಡುವ ಒಬ್ಬ ಆಫಿಸರನ್ನು ಮೊಕರರ್ರಾಡ ಬಹುದು.

(3.) ಈ ರೆಗ್ಯುಲೇಷ್ಯಗಳ ಕಾರ್ಯಗಳಿಗಾಗಿ ಸಂಪೂರ್ಣವಾದ ಕಾರ್‌ಬಾರ್ ಅಧಿಕಾರವೂ ಮತ್ತು ಜವಾಬ್ದಾರಿಯೂ, ಪ್ರೆಸಿಡೆಂಟರಲ್ಲಿಯೂ ಮತ್ತು ಅವರ ಗೈರ್ ಹಾಜರಿಯಲ್ಲಿ ಅಥವಾ ಅವರ ಮೇಲ್ವಿಚಾರಣೆಗೊಳಪಟ್ಟು ಮತ್ತು ಅವರ ಹುಕುಂಗಳನ್ನನುಸರಿಸಿ ವೈಸ್ ಪ್ರೆಸಿಡೆಂಟರಲ್ಲಿಯೂ ಅಡಗಿರತಕ್ಕದ್ದು. ಮ್ಯೂನಿಸಿಪೆಲ್ ಕಮ್ಮಿಷನರ್‌ಗಳಿಂದ ಮಾಡಲ್ಪಡತಕ್ಕದ್ದೆಂದು ಇದರಲ್ಲಿ ಮುಂದೆ ನಿಯಮಿಸಲ್ಪಡುವ ತಮಾಂ ಕಾರ್‌ಬಾರೀ ಕೆಲಸಗಳೂ, ಸಂದರ್ಭದ ದೆಸೆಯಿಂದ ವಿರುದ್ಧಾಭಿಪ್ರಾಯವೇನೂ ಕಾಣಬಾರದೆ ಇದ್ದರೆ, ಸದರೀ ಪ್ರೆಸಿಡೆಂಟರಿಂದಾಗಲಿ ವೈಸ್ ಪ್ರೆಸಿಡೆಂಟರಿಂದಾಗಲಿ ಮಾಡಲ್ಪಡತಕ್ಕದ್ದು. ಪರಂತು ಈ ಸೆಕ್ಷನಿನಲ್ಲಿ ಅಡಗಿರುವ ಯಾವ ಅಂಶವೂ ಸದರೀ ಪ್ರೆಸಿಡೆಂಟರ ಅಥವಾ ವೈಸ್ ಪ್ರೆಸಿಡೆಂಟರ ಯಾವ ಕಾರ್ಯವಾಗಲಿ ಯಾವ ವಿಾಟಿಂಗ್‌ನಲ್ಲಾಗಲಿ ಹಾಜರಿರುವ ಮ್ಯೂನಿಸಿಪೆಲ್ ಕಮ್ಮಿಷನರ್‌ಗಳಿಂದ ರದ್ದುಮಾಡಲ್ಪಡತಕ್ಕದ್ದನ್ನು ನಿರೋಧಿಸುವದಾಗಿ ಅಭಿಪ್ರಾಯ ಪಡತಕ್ಕದ್ದಲ್ಲವು.

2. ಮೇಲೆ ಕಂಡ ಮ್ಯೂನಿಸಿಪೆಲ್ ರೆಗ್ಯುಲೇಷ್ಯಗಳ ಹನ್ನೊಂದನೆಯ ಸೆಕ್ಷನಿಗೆ ಬದಲಾಗಿ ಹಿಂದಿನ ಸೆಕ್ಷನಿನಿಂದ ಸೇರಿಸಲ್ಪಟ್ಟ ಸೆಕ್ಷನನ್ನು 1888ನೇ ಇಸವಿಯ IIIನೇ ನಂಬರ್ ರೆಗ್ಯುಲೇಷ್ಯ ಅನುಸರಿಸಿ ಮೈಸೂರ್ ಷಹರ್‌ನೊಳು ಜಾರಿಯಲ್ಲಿ ತರಲ್ಪಟ್ಟಿರುವ ಮೇಲೆ ಕಂಡ ಮ್ಯೂನಿಸಿಪೆಲ್ ರೆಗ್ಯುಲೇಷ್ಯಗಳ ಒಂದು ಭಾಗವನ್ನಾಗಿ ಓದಿಕೊಳ್ಳತಕ್ಕದ್ದು."

ಕೆ. ಶೇಷಾದ್ರಿ ಅಯ್ಯರ್,
ಮೈಸೂರ್ ಶೇಮಿಯು ದಿವಾ೯.